


ಶಿವನಸಮುದ್ರದ ಸುಂದರ ನೋಟ

'ಯಾನವ್ವಾ? ಬರಬೇಕಾ ಕುಸು? ನಮ್ಮಟ್ಲಿ ಒಬ್ರೂ ಇಲ್ಲ. ಇಲ್ಲಿ ಗಲಾಟಿ ನಿನಗ. ಬವ್ವ ಅಲ್ ಕೂತ್ಕಂಡ್ ಬರ್ಕಳ್ಳೈ' ಅಂತ ರತ್ನಕ್ಕ ಅವರಟ್ಟಿ ದಾರಿ ತೋರ್ಸಿದ್ರು. ಅವರ್ ತೊಟ್ಟಿ ಹಟ್ಟಿ ಕಂಬಕ್ ಒರಿಕಂಡು ನಾನೂ ಸುರುಅಚ್ಕಂಡೆ. 'ಬರ್ದು ಯಾರ್ ಕೈಲ್ ಕೊಟ್ ಕಳಿಸಿಯವ್ವ ಬೆಂಗಳೂರ್ಗ?' ಅಂನ್ಕಂಡ್ ಮುಂದಕ್ ಬಂದ್ರು ರತ್ನಕ್ಕ 'ಯಾರೂ ಓಗಂಗಿಲ್ಲ ಇದ್ರಲ್ಲೇ ಕಳಿಸ್ಬೋದು' ಅಂದೆ. 'ಅವ್ವೈ... ಇದ್ರಲ್ಲೆಂಗ್ ಒಂಟೋದ್ದವ್ವ ಬೆಂಗಳೂರ್ಗಂಟ?' ಅಂತ ಬಾಯ್ ಮೇಲ್ ಬೆಳ್ ಮಡಿಕಂಡಾಗ. ಇರಾ ಬರಾ ಶಕ್ತಿಮೀರಿ ವಿವರ ಕೊಟ್ಟಿದ್ದಾಯ್ತು (ಒಳಗೊಳಗೇ ಸ್ಕೋಪು). 'ಯಾನವಾ ಇಂಗಾಗೋಯ್ತು ಪ್ರಪಂಚ... ಸರಿ ಕಣ್ ನನ್ ತಾಯಿ. ಬರ್ಕವ... ಬರ್ಕ' ಅಂತ ಏಕಾಂತಕ್ ದಾರಿ ಮಾಡ್ಕೊಟ್ರು. ನಾನೂ ಕುಟ್ಟಕ್ ಸುರು ಮಾಡ್ಕಂಡೆ.

ಸ್ವಲ್ಪತ್ತಲೇ ಬಾಗಿಲು ಕೊಂಯಕ್ ಅಂತ ಸದ್ ಮಾಡ್ತು, ತಿರುಗ್ ನೋಡುದ್ರೆ ಒಂದಜ್ಜಿ, 'ರತ್ನೀ... ಯಾನ್ ಮಾಡಿಯೇ' ಅನ್ಕಂಡ್ ಎಂಟ್ರಿ ಕೊಟ್ರು. 'ಬನ್ನೆಮ್ಮ, ಯಾನು ಇಲ್ಲ ಕಣ್ ಬನ್ನಿ' ಅಂತ ಸ್ವಾಗತ ಮಾಡುದ್ರು ರತ್ನಕ್ಕ. 'ಯಾನ ಒಬ್ಬರ ಸದ್ದೂ ಇಲ್ಲ ಅನ್ನಂಗದ?' ಅಂತ ಪ್ರಶ್ನೆ ಕೇಳ್ತಲೇ ಕಂಬ ಇಡ್ಕಂಡ್ ತೊಟ್ಟಿಗ್ ಕಾಲು ಇಳಿಬುಟ್ರು. 'ಐಕ ಇಸ್ಕೂಲ್ಗೋಗವ, ಇವರು ಒಲದ್ ತಾವ್ಕೋಗರ, ಇನ್ಯಾರಿದ್ದರು? ನಾ ಒಬ್ಬಳೀಯೆ, ಟೀ ಮಡುಗಲ್ಯಾ?' ಅನ್ನುವ ರೆಗ್ಯುಲರ್ ಕೊಶ್ಚನ್ ಕ್ಯೋಳುದ್ರು. 'ಬ್ಯಾಡ ಕವ್ವ, ಈಗ್ ತಾನೇ ಉಂಡ್ಕಂಡ್ ಬಂದೀನಿ. ಈ ತಾಯಿ ಯಾರಾ?' ಅಂತ ನನ್ ಕಡೆ ಕಣ್ಬುಟ್ರು ನಿಂಗಮ್ಮಜ್ಜಿ. 'ಏ ಸಿದ್ದಪ್ಪಣ್ಣನ್ ತಮ್ಮನ್ ಸೊಸ' ಅಂದಾಗ, ನಿಂಗಮ್ಮಜ್ಜಿ ಒಸಿ ದಂಡೆಕ್ ಬಂದು ದೃಷ್ಟಿಸಿ ನೋಡಿ, 'ನೀನಿಯವ್ವ? ನಾ ನೋಡೇ ಇರ್ನಿಲ್ಲ, ಎಲ್ಲ ಸಿಟಿ ಸೇರ್ಕಂಡಿದ್ದರಿ ನಾವೆಲ್ ಕಾಣವ್ ನಿಮ್ಮ? ಚೆಂದಾಗಿದ್ದಯಾ?' ಅಂದ್ರು. ನನ್ ಉತ್ತರ ಕೊಡೋಕೂ ಅವಕಾಸ ಕೊಡದೇ ಮಾತ್ ಸುರು ಅಚ್ಗಂಡ್ರು. 'ನಾನು ಈ ಸಿದ್ದಪ್ಪನಾ, ರಾಜಪ್ಪನಾ ಎಲ್ರೂನೂ ಸಾಕಿದಂವ, ನನ್ ಕೈಲೇ ಬೆಳುದ್ರು ಅವರೆಲ್ಲ. ನಾ ಇನ್ನೂ ಇವನಿ ನೋಡು, ನನ್ ಮುಂದ್ ಅವನೇ ಒಂಟೋದ ಒಳ್ಳಿ



ಇಬ್ಬನಿಯಲ್ಲಿ ಮಿಂದ ಹಿಮವದ್ ಗೋಪಾಲಸ್ವಾಮಿ ದೇಗುಲ

ಪಾಯಿ' ಅಂತ ಅಷ್ಟೊತ್ ಗುಣಗಾನ ಮಾಡಿ, ಕಣ್ಣೊರೆಸ್ಕೊಂಡ್ರು.

ರತ್ನಕ್ಕ, 'ದಾರಾವಾಯಿ ಬರತಳ ಅಂತ್ ಮಾತಾಡ್ತಿರ್ನಿಲ್ವ? ಅವಳೀಯೇ ಇಂವ, ಅದ್ಯಾನ ಬರೀಬೇಕಂತ, ಅವರಟ್ಲಿ ಒಸಿ ಗಲಾಟಿ ಅಂತ ಇಲ್ಲಗ್ ಕರ್ಕಂಡ್ ಬಂದಿ' ಅಂದ್ರು. ನಿಂಗಜ್ಜಿ. 'ಊ ಕ ಕುಸ್ಯೆ. ನಮ್ಮಟ್ಲು ಐಕ ಮಾತಾಡ್ತಿದ್ದೋ, ಸಿದ್ದಪ್ಪಣ್ಣನ್ ಸೊಸ್ಯಂತ ಇದ್ ಬರೆಂವ ಅಂತ್ಯೋಳತಿದ್ದೋ' ಅಂದಾಗ, ತಗಡೂರಿನಲ್ಲಿ ಸಿಕ್ಕರೋ ಪಬ್ಲಿಸಿಟಿಗೆ ಒಳಗೇ ಸ್ಕೋಪು ವಿಮಾನ ಟೇಕ್ ಆಫ್ ಆಗ್ತಾ ಇತ್ತು. ನಿಂಗಜ್ಜಿ ಮುಂದುವರಿಸ್ತು... 'ನಮ್ಮಟ್ಲೆ ಎಲ್ಲ ಆಕಂಡ್ ನೋಡ್ತರ ಕವ್ವ ಅಲ್ ಕಿರ್ಕಂಡು, ಅದ್ಯಾನ ನಂಗ್ ಮಾತ್ರಿಯೇ ಇಡಿಸಲ್ಲ ಕವ್ವ, ಅದ್ಯಾನ ಕುಸ್ಯೆ ನೀ ಬರ್ಯಾದು? ಒಂದ್ ರಾಮಾಯನ್ವಲ್ಲ, ಮಾಬಾರತ್ವಲ್ಲ, ಕಷ್ಟಿಲ್ಲ, ಸುಖವಿಲ್ಲ, ಅಂವ್ ಕೊಡಲ್ಲ ಅಂತಳ, ಇಂವ್ ಬುಡಲ್ಲ ಅಂತಳ, ಎಷ್ಟ್ ನೋಡುದ್ರೂ ಅಷ್ಟಿಯೇ... ಅದ್ಯಾನ್ನ ಕುಸ್ಯೆ ನೋಡದು?, ನಾ ನೊಡಲ್ಲ ಕವ್ವ. ದ್ಯಾವನೂರ್ ಮಠದಲ್ಲಿ ಕತ ಗಿತ ಮಡುಗುದ್ ದಿನಕ್ ಓಗ್ ಕ್ಯೋಳ್ತೀನಿ. ಬಂದ್ ಮನಿಕತ್ತಿನಿ. ನೀ ಯಾನ್ಯಾರು ಅನ್ನು ಕುಸ್ಯೆ, ಈ ಟೀಬಿ ಮಾತ್ರ ನಂಗ್ ಇಡಿಸಲ್ಲ ಕವ್ವ' ಅಂದವರು ನನ್ ಉತ್ರ ಅನಗತ್ಯ ಅನ್ನೂವಂಗೆ ಎದ್ದು 'ಈ ಕತ ಗಿತ ಬರೆದ್ ಬುಟ್ಬುಟ್ಟು ಒಂದ್ ಕೂಸ್ ಗೀಸ್ ಎರವ್ವ ಬ್ಯಾಗನ' ಅಂತ ಆಜ್ಞಾಪಿಸಿ. 'ಬತ್ತೀನಿ ಕಮ್ಮೀ ರತ್ನಿ, ಅಸ್ಗಳ್ ಬರಾ ಒತ್ತಾಯ್ತು ಆಲ್ ಕರಾಬೇಕೂ' ಅನ್ನೋತಾ ಒಸಿಲ್ ದಾಟಿದ್ರು. ■

ಕಳೆದ ವಾರದ 'ಚೆನ್ನುಡಿ'
'ಮಳೆಗಾಲ, ಕೆರೆಹಾವು ಮತ್ತು ರೇಡಿಯೊ ವಾರ್ತೆ' ಕೇಳಿ **ಸುನಂದಾ ಕಡಮೆ** ಅವರ ಧ್ವನಿಯಲ್ಲಿ



ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.